ದಿನಾಂಕ: 30-05-2009ರಂದು ಶನಿವಾರ ಅಪರಾಹ್ನ 3-00 ಗಂಟೆಗೆ ಸರಿಯಾಗಿ ಉಳ್ಳಾಲ ಪುರಸಭೆಯ ಕಚೇರಿಯ ಸಭಾಂಗಣದಲ್ಲಿ ಪುರಸಭಾ ಅಧ್ಯಕ್ಷರಾದ ಶ್ರೀ ಯು.ಎ ಇಸ್ಮಾಯಿಲ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಾಮಾನ್ಯ ಸಭೆಯ ನಡವಳಿಗಳು

ಹಾಜರಿ: ಅಧ್ಯಕ್ಷರು ಮತ್ತು ಸದಸ್ಯರು

--------

ಸಭೆಯ ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಉಳ್ಳಾಲದ ಮಾಜಿ ಶಾಸಕರಾದ ಶ್ರೀ ಬಿ.ಎಂ ಇದ್ದಿನಬ್ಬರವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಮತ್ತು ನೂತನವಾಗಿ ಲೋಕಸಭೆಗೆ ಅಯ್ಕೆಯಾದ ಶ್ರೀ ನಳಿನ್ ಕುಮಾರ್ ಕಟೀಲು ಇವರಿಗೆ ಅಭಿನಂದನೆ ಸಲ್ಲಿಸಲಾಯಿತು.

ವಿಷಯ:1: ಹಿಂದಿನ ಸಾಮಾನ್ಯ ಸಭೆಯ ನಡವಳಿ 28-02-2009 ಮತ್ತು ಸ್ಥಾಯಿಸಮಿತಿ ಸಭೆಯ ನಡವಳಿ 22-5-2009ಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು

ವಿಷಯ: 2: ಜನವರಿ 2009, ಫೆಬ್ರವರಿ 2009, ಮಾರ್ಚ್ 2009 ತಿಂಗಳ ಜಮಾಖರ್ಚು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ:3: ಉಳ್ಳಾಲ ಪುರಸಭೆಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಅಂದಾಜನ್ನು ಆಡಳಿತಾತ್ಮಕ ಅನುಮೋದನೆಗಾಗಿ ಸರಕಾರಕ್ಕೆ ಸಲ್ಲಿಸಲು ಅಂದಾಜುಮೊತ್ತ(ರೂ.6571-00ಲಕ್ಷಗಳು) ಮುಖ್ಯ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ಪತ್ರ ದಿನಾಂಕ 20-05-2009ರ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಈ ಕೆಳಗಿನಂತೆ ನಿರ್ಣಯಿಸಲಾಯಿತು.

1) ಉಳ್ಳಾಲ ಪುರಸಭೆಯ ಒಳಚರಂಡಿ ಯೋಜನೆಗೆ ತಗಲುವ ವೆಚ್ಚ ಅಂದರೆ ರೂ 6571.00ಲಕ್ಷಗಳಲ್ಲಿ ಶೇ50ರಷ್ಟು ಅಂದರೆ ರೂ. 3285.50ಲಕ್ಷಗಳನ್ನು ಅರ್ಥಿಕ ಸಂಸ್ಥೆಗಳಿಂದ ಸಾಲ ಪಡೆಯಲು ಪುರಸಭೆಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಒಪ್ಪಿಗೆ ನೀಡಿರುತ್ತದೆ

2) ಮೇಲಿನ ಸದರಿ ಅಂದಾಜಿನ ಶೇ30ರಷ್ಟು ಅಂದರೆ ರೂ 1971.30ಲಕ್ಷಗಳನ್ನು ಸರ್ಕಾರದಿಂದ ಸಾಲವಾಗಿ ಪಡೆಯಲು ಹಾಗೂ ಸದರಿ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕಾರ್ಯಗತಗೊಳಿಸಲು ಒಪ್ಪಲಾಗಿದೆ.

3) ಮೇಲಿನ ಸದರಿ ಅಂದಾಜಿನ ಶೇ20ರಷ್ಟು ಅಂದರೆ 1314.20ಲಕ್ಷಗಳನ್ನು ಪುರಸಭೆವತಿಯಿಂದ ಭರಿಸಲು ಪುರಸಭೆಯು ಸರ್ವಾನುಮತದಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಒಪ್ಪಿಗೆ ನೀಡಿರುತ್ತದೆ.

4) ಅರ್ಥಿಕ ಸಂಸ್ಥೆಗಳಿಂದ ಪಡೆದ ಸಾಲವನ್ನು ಬಡ್ಡಿ ಸಮೇತ ಪುರಸಭೆಯ ವತಿಯಿಂದ ಮರುಪಾವತಿ ಮಾಡಲು ಪುರಸಭೆಯು ಒಪ್ಪಿಗೆ ನೀಡಿದೆ.

5) ಈ ಯೋಜನೆಯನ್ನು ಕಾರ್ಯಗತ ಮಾಡುವ ಸಮಯದಲ್ಲಿ ಸಾಮಾಗ್ರಿಗಳ ಬೆಲೆ ಏರಿಕೆಯಿಂದ ಅಥವಾ ಇತರ ಅನಿರೀಕ್ಷಿತ ಕಾರಣಗಳಿಂದ ಹೆಚ್ಚಾದ ವೆಚ್ಚವನ್ನು ಪುರಸಭೆಯ ವತಿಯಿಂದ ಭರಿಸಲು ಒಪ್ಪಲಾಗಿದೆ.

6) ಸದರಿ ಯೋಜನೆಯನ್ನು ಕಾರ್ಯಗತಗೊಳಿಸಿ ಪುರಸಭೆಗೆ ಹಸ್ತಾಂತರಿಸಿದ ನಂತರ ಅದರ ನಿರ್ವಹಣೆಯನ್ನು ನೋಡಿಕೊಳ್ಳಲು ಪುರಸಭೆಯು ಒಪ್ಪಿಗೆ ನೀಡಿದೆ.

ವಿಷಯ:4: 2009-2010ನೇ ಸಾಲಿಗೆ ವಾರ್ಷಿಕ ನಿರ್ವಹಣಾ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಕ್ರಮಕೈಗೊಳ್ಳುವುದಾಗಿ ನಿರ್ಣಯಿಸಲಾಯಿತು.

1) ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ 2009-2010ನೇ ಸಾಲಿನ ದಾರಿದೀಪ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
   ನಿರ್ಣಯ: ಬಂದ ಮೂರು ಟೆಂಡರುಗಳನ್ನು ಪರಿಶೀಲಿಸಲಾಯಿತು. ಬಂದ ಟೆಂಡರುಗಳಲ್ಲಿ ಶ್ರೀ ಅಶೋಕ್ ಎ.ವಿ ಇಲೆಕ್ಟ್ರಿಕಲ್ಸ್, ಇವರ ಮಾಸಿಕ ಟೆಂಡರು ದರವು ರೂ.138500/- ಕನಿಷ್ಟ ದರವಾಗಿದ್ದರೂ ಸದ್ರಿ ದರವು 2008-09ನೇ ಸಾಲಿನ ದರಕ್ಕಿಂತ ಶೇಕಡಾ 100ಕ್ಕಿಂತಲೂ ಜಾಸ್ತಿಯಾಗಿರುವುದರಿಂದ ಸದ್ರಿ ಟೆಂಡರನ್ನು ರದ್ದುಪಡಿಸಿ ಅಲ್ಪಾವಧಿ ಮರುಟೆಂಡರು ಕರೆಯಲು ನಿರ್ಣಯಿಸಲಾಯಿತು.

2) 2009–2010ನೇ ಸಾಲಿನಲ್ಲಿ ದಾರಿದೀಪ ಮತ್ತು ವಿದ್ಯುತ್ ಸಾಮಾಗ್ರಿಗಳನ್ನು ಖರೀದಿಸುವ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಬಂದ ಟೆಂಡರುಗಳಲ್ಲಿ ಅತೀ ಕಡಿಮೆದರ ಸೂಚಿಸಿದ ಮೇ ಸನ್‌ಲೈಟ್ ಲುಮೀನರಿಸ್ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

3) 2009–2010ನೇ ಸಾಲಿನಲ್ಲಿ ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕಾಮಗಾರಿ ನಿರ್ವಹಿಸುವ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಅತೀ ಕಡಿಮೆ ದರ ಸೂಚಿಸಿದ ಶ್ರೀ ನವೀನ್‌ಚಂದ್ರ ಮಾಡ ಇವರ ಮಾಸಿಕ ದರ ರೂ 174999–00ನ್ನು ಒಪ್ಪಿ ಮಂಜೂರು ಮಾಡಲಾಯಿತು.

4) 2009–2010ನೇ ಸಾಲಿನಲ್ಲಿ ಉಳ್ಳಾಲ ಪುರಸಭಾ ವ್ಯಾಪ್ತಿಯ ತಗ್ಗುಪ್ರದೇಶದ ರಸ್ತೆಗಳಿಗೆ ಕಲ್ಲುತುಂಡು ಹಾಕಿ ದುರಸ್ತಿಗೊಳಿಸುವುದು.
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಅತೀ ಕಡಿಮೆ ದರ ಸೂಚಿಸಿದ ಶ್ರೀ ಆಸ್ಟಿನ್ ವಿಜಯಕುಮಾರ್, ಲೋವರ್, ಮರೋಳಿ ಮಂಗಳೂರು ಇವರ ದರ ರೂ 410–00ನ್ನು ಪುರಸಭೆ ಒಪ್ಪದೆ ಟೆಂಡರುದಾರರನ್ನು ಮಾತುಕತೆಗೆ ಕರೆದು ನೆಗೋಶಿಯೇಶನ್ ಪ್ರಕಾರ ರೂ. 375–00 (ಪ್ರತಿ ಘನಮೀಟರ್‌ಗೆ)ಕ್ಕೆ ಒಪ್ಪಿ ಮಂಜೂರು ಮಾಡಲಾಯಿತು.

5) 2009–2010ನೇ ಸಾಲಿನಲ್ಲಿ ಉಳ್ಳಾಲ ಪುರಸಭೆ ವ್ಯಾಪ್ತಿಯಲ್ಲಿ ಚರಂಡಿಯ ಹೂಳೆತ್ತುವುದು ಮತ್ತು ಮಣ್ಣು ಸಾಗಿಸುವುದು ಮಣ್ಣು ಸಮತಟ್ಟುಗೊಳಿಸುವುದು ಹಾಗೂ ಅತಿಕ್ರಮಣ ತೆರವುಗೊಳಿಸುವ ಕಾರ್ಯಾಚರಣೆ ಸೇರಿದಂತೆ ಜೆಸಿಬಿ ಯಂತ್ರ ಹಾಗೂ ಟಿಪ್ಪರ್ ವಾಹನ ಒದಗಿಸುವುದು
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಅತೀ ಕಡಿಮೆದರ ಸೂಚಿಸಿದ ಜೆಸಿಬಿ – ರೂ.950–00, ಹಿತಾಚಿ –1350, ಟಿಪ್ಪರ್ –450(ಪ್ರತಿಗಂಟೆಗೆ) ಶ್ರೀ ಅಸ್ಟಿನ್ ವಿಜಯಕುಮಾರ್ ಲೋವರ್,ಮರೋಳಿ ಇವರ ದರವನ್ನು ಪುರಸಭೆ ಒಪ್ಪದೆ ಟೆಂಡರುದಾರರನ್ನು ಮಾತುಕತೆಗೆ ಕರೆದು ನೆಗೋಶಿಯೇಶನ್ ಪ್ರಕಾರ ಜೆಸಿಬಿ – ರೂ. 750–00 ಹಿತಾಚಿ– ರೂ 850–00 ಮತ್ತು ಟಿಪ್ಪರ್ – ರೂ 325–00(ಪ್ರತಿಗಂಟೆಗೆ) 2 ಟಿಪ್ಪರಿಗಿಂತ ಹೆಚ್ಚಾದರೆ ಪ್ರತಿಟಿಪ್ಪರೊಂದರ ದರ ರೂ. 275–00 ಪ್ರತಿಗಂಟೆಗೆ ಒಪ್ಪಿ ಮಂಜೂರು ಮಾಡಲಾಯಿತು.

6) 2009–2010ನೇ ಸಾಲಿಗೆ ಆರೋಗ್ಯ ವಿಭಾಗಕ್ಕೆ ಬ್ಲೀಚಿಂಗ್ ಪೌಡರ್, ಫಿನಾಯಿಲ್, ಬೈಟೆಕ್ಸ್ ಇತ್ಯಾದಿ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಅತೀ ಕಡಿಮೆ ದರ ಸೂಚಿಸಿದ ವಿಎಸ್ ಏಜೆನ್ಸೀಸ್ ಬಿಜೈ, ಮಂಗಳೂರು ಇವರ ದರ ಬ್ಲೀಚಿಂಗ್ ಪೌಡರ್ ಕೆ.ಜಿ ಒಂದರ ರೂ 30–00 ಫಿನಾಯಿಲ್ ಲೀಟರ್ ಒಂದರ ದರ ರೂ 40–00 ಬೈಟೆಕ್ಸ್ ಲೀಟರ್ ಒಂದರ ದರ 2180–00 ಇವರ ದರವನ್ನು ಪುರಸಭೆ ಒಪ್ಪದೆ ಟೆಂಡರುದಾರರನ್ನು ಮಾತುಕತೆಗೆ ಕರೆದು ನೆಗೋಷಿಯೇಶನ್ ಪ್ರಕಾರ ಬ್ಲೀಚಿಂಗ್ ಪೌಡರ್ ಕೆ.ಜಿ ಒಂದರ – ರೂ.28–00, ಫಿನಾಯಿಲ್ ಲೀಟರ್ ಒಂದರ ರೂ 30–00 ಬೈಟೆಕ್ಸ್ ಲೀಟರ್ ಒಂದರ ರೂ 2180–00ನ್ನು ಒಪ್ಪಿ ಮಂಜೂರು ಮಾಡಲಾಯಿತು.

7) ಉಳ್ಳಾಲ ಪುರಸಭೆ ವ್ಯಾಪ್ತಿಯ 2009–2010ನೇ ಸಾಲಿನಲ್ಲಿ ಕೊಳವೆಸಾಲುಗಳ ಸೋರುವಿಕೆಯ ದುರಸ್ತಿ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು ಅತೀ ಕಡಿಮೆ ದರ ಸೂಚಿಸಿದ ಶ್ರೀ ವಿಜಯ ಉಳ್ಳಾಲ್ ಇವರ ಮಾಸಿಕ ದರ ರೂ 35000/–ವನ್ನು ಪುರಸಭೆ ಒಪ್ಪದೆ ಟೆಂಡರುದಾರರನ್ನು ಮಾತುಕತೆಗೆ ಕರೆದು ನೆಗೋಶಿಯೇಶನ್ ಪ್ರಕಾರ ಮಾಸಿಕ ದರ ರೂ 34500/–ಕ್ಕೆ ಒಪ್ಪಿ ಮಂಜೂರು ಮಾಡಲಾಯಿತು.

8) ಉಳ್ಳಾಲ ಪುರಸಭೆ ವ್ಯಾಪ್ತಿಯ 2009–2010ನೇ ಸಾಲಿನಲ್ಲಿ ಪಂಪುದುರಸ್ತಿ ಮತ್ತು ನಿರ್ವಹಣೆ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಅತೀ ಕಡಿಮೆ ದರ ಸೂಚಿಸಿದ ಶ್ರೀ ಅಶೋಕ್ ಕುಂದರ್, ಮೇ ಅಮರ್ ಇಲೆಕ್ಟ್ರಿಕಲ್ಸ್ ಇವರ ದರ ರೂ 32,000/–(ಪ್ರತಿತಿಂಗಳಿಗೆ) ಒಪ್ಪಿ ಮಂಜೂರು ಮಾಡಲಾಯಿತು.

9) ಉಳ್ಳಾಲ ಪುರಸಭೆ ವ್ಯಾಪ್ತಿಯ 2009–2010ನೇ ಸಾಲಿನಲ್ಲಿ ಸಮರ್ಪಕ ರೀತಿಯಲ್ಲಿ ಪಂಪುಚಾಲನೆ ಮಾಡಿ ನೀರು ಸರಬರಾಜು ಮಾಡುವುದು
ನಿರ್ಣಯ:ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಅತೀ ಕಡಿಮೆದರ ಸೂಚಿಸಿದ ಶ್ರೀ ವಿಜಯ ಉಳ್ಳಾಲ ಇವರ ಮಾಸಿಕ ದರ 44,000/–ವನ್ನು ಪುರಸಭೆ ಒಪ್ಪದೆ ಟೆಂಡರುದಾರರನ್ನು ಮಾತುಕತೆಗೆ ಕರೆದು ನೆಗೋಶಿಯೇಶನ್ ಪ್ರಕಾರ ಮಾಸಿಕ ದರ ರೂ 42,000/–ಕ್ಕೆ ಒಪ್ಪಿ ಮಂಜೂರು ಮಾಡಲಾಯಿತು.

10) ಉಳ್ಳಾಲ ಪುರಸಭೆ ವ್ಯಾಪ್ತಿಯ 2009-2010ನೇ ಸಾಲಿನಲ್ಲಿ ಕುಡಿಯುವ ನೀರಿನ ಅಭಾವವಿರುವ ಪ್ರದೇಶಗಳಿಗೆ ಟ್ಯಾಂಕರ್ ಅಥವಾ ಪಿಕಪ್ ವಾಹನ ಬಳಸಿ ಸಿಂಟೆಕ್ಸ್ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಅತೀ ಕಡಿಮೆ ದರ ಸೂಚಿಸಿದ ಶ್ರೀ ನಜೀರ್ ಅಹಮ್ಮದ್ ಉಳ್ಳಾಲ ಇವರ ರೂ 185-00(3500ಲೀ ಸಾಮಾರ್ಥ್ಯದ ಪ್ರತಿ ಟ್ಯಾಂಕರ್‌ಗೆ)ವನ್ನು ಪುರಸಭೆ ಒಪ್ಪದೆ ಟೆಂಡರುದಾರರನ್ನು ಮಾತುಕತೆಗೆ ಕರೆದು ನೆಗೋಶಿಯೇಶನ್ ಪ್ರಕಾರ ರೂ.180-00 (3500ಲೀಟರ್ ಸಾಮಾರ್ಥ್ಯದ ಪ್ರತಿ ಟ್ಯಾಂಕರ್‌ಗೆ)ಕ್ಕೆ ಒಪ್ಪಿ ಮಂಜೂರು ಮಾಡಲಾಯಿತು.

ವಿಷಯ:5(1): ಪೌರಾಡಳಿತ ನಿರ್ದೇಶನಾಲಯದ ಪತ್ರಸಂ: ಪೌನಿ:ತಾಂತ್ರಿಕ:12ನೇ ಹಣಕಾಸು/172/2005-06 ದಿನಾಂಕ 16-4-2009ರಂತೆ 12ನೇ ಹಣಕಾಸು ಯೋಜನೆಯಲ್ಲಿ ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಿ ಈ ಕೆಳಗಿನಂತೆ ಕ್ರಿಯಾಯೋಜನೆಯನ್ನು ತಯಾರಿಸಿ ಮಂಜೂರಾತಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಕಳುಹಿಸುವುದಾಗಿ ನಿರ್ಣಯಿಸಲಾಯಿತು.

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜುವೆಚ್ಚ(ಲಕ್ಷಗಳಲ್ಲಿ) |
|---|---|---|
| 1. | ಎ) ಉಳ್ಳಾಲ ಪುರಸಭಾ ವ್ಯಾಪ್ತಿಯ ಉಳ್ಳಾಲ ಉಳಿಯ ಹೊಯಿಗೆ ಮಾಜಿ ಕೌನ್ಸಿಲರ್ ಬಾಜಿಲ್ ಡಿಸೋಜರ ಮನೆಬಳಿ ಚರಂಡಿ ರಚನೆ | : 5.00 |
| | ಬಿ) ಉಳ್ಳಾಲ ಪುರಸಭಾ ವ್ಯಾಪ್ತಿಯ ಕಲ್ಲಾಪು ನೇತ್ರಾವತಿ ನದಿತೀರದ ಬೇಬಿಡಿಸೋಜರ ಮನೆಬಳಿ ಚರಂಡಿ ರಚನೆ | : 4.50 |
| | ಸಿ) ಉಳ್ಳಾಲ ಪುರಸಭಾ ವ್ಯಾಪ್ತಿಯ ಸುಂದರಿಬಾಗ್ ಮಸೀದಿ ಹತ್ತಿರ ಹಸ್ಸೈನಾರ್ ಮನೆಬಳಿ ರಸ್ತೆ ಅಭಿವೃದ್ಧಿ | : 2.50 |
| | | 12.00 |
| 2. | ಎ) ಉಳ್ಳಾಲ ಪುರಸಭೆಯ ಮಹಾತ್ಮಗಾಂಧಿ ರಂಗಮಂದಿರಕ್ಕೆ ಕೋಲೇಪ್ಸೆಬುಲ್ ಗೇಟ್ ಅಳವಡಿಸುವುದು ಮತ್ತು ವಿದ್ಯುದ್ದೀಕರಣ ಮಾಡುವ ಬಗ್ಗೆ | 0.50 |
| | | 0.50 |
| 3. | ಎ) ಉಳ್ಳಾಲ ಪುರಸಭಾ ವ್ಯಾಪ್ತಿಯ ಮಾರ್ಗತಲೆ ಹೊಳೆಬದಿಯ ರಸ್ತೆಗೆ ಕಾಂಕ್ರೀಟಿಕರಣ | 4.08 |
| 4. | ಎ) ಉಳ್ಳಾಲ ಪುರಸಭಾ ವ್ಯಾಪ್ತಿಯ ಕಡೆಹಿತ್ಲು ಶೀನ ಕಂಪೌಂಡು ಎಂಬಲ್ಲಿ ರಸ್ತೆ ಅಭಿವೃದ್ಧಿ | 4.08 |
| | | 8.16 |

ವಿಷಯ:5(2)ಉಳ್ಳಾಲ ಪುರಸಭೆಗೆ 2008-09ನೇ ಸಾಲಿನಲ್ಲಿ ಬಿಡುಗಡೆಯಾದ 12ನೇ ಹಣಕಾಸು ಯೋಜನೆಯ ಮುಕ್ತನಿಧಿ ಶೀರ್ಷಿಕೆಯಡಿಯಲ್ಲಿ ನಿರ್ವಹಿಸುವ ಕಾಮಗಾರಿಗೆ ಕ್ರಿಯಾಯೋಜನೆ ತಯಾರಿಸಿ ಮಂಜೂರು ಮಾಡುವ ಕುರಿತು

ನಿರ್ಣಯ: ಈ ಕೆಳಗಿನ ಕಾಮಗಾರಿಗಳಿಗೆ ಕ್ರಿಯಾಯೋಜನೆ ತಯಾರಿಸಿ ಮಂಜೂರಾತಿಗಾಗಿ ಮಾನ್ಯ ಜಿಲ್ಲಾದಿಕಾರಿಯವರನ್ನು ವಿನಂತಿಸುವುದಾಗಿ ನಿರ್ಣಯಿಸಲಾಯಿತು.

| | | |
|---|---|---|
| 1. | ಉಳ್ಳಾಲ ಪುರಸಭಾ ವ್ಯಾಪ್ತಿಯ ಬಂಡಸಾಲೆ ಇಸಾಕ್ ಡಿಸೋಜರ ಮನೆ ಬಳಿ ರಸ್ತೆ ಎತ್ತರಿಸಿ ಡಾಮರೀಕರಣ | : 4.08 ಲಕ್ಷ |
| 2. | ಉಳ್ಳಾಲ ಪುರಸಭಾ ವ್ಯಾಪ್ತಿಯ ಕಕ್ಕೆತೋಟ ದೊಡ್ಡ ತೋಡಿನ ಕಾಂಕ್ರೀಟು ಬದಿಕಟ್ಟುವುದು | : 4.08 ಲಕ್ಷ |
| | ಒಟ್ಟು | : 8.16 ಲಕ್ಷ |

ವಿಷಯ:6: ಉಳ್ಳಾಲ ಪುರಸಭೆ ವ್ಯಾಪ್ತಿಯಲ್ಲಿ ಈಗಾಗಲೇ ಕುಡ್ಸೆಂಪ್ ವತಿಯಿಂದ ಕುಡಿಯುವ ನೀರಿನ ಕಾಮಗಾರಿ ನಿರ್ವಹಿಸುತ್ತಿದ್ದು, ಪೆರ್ಮನ್ನೂರು ಗ್ರಾಮದಲ್ಲಿ ಪ್ರಥಮಹಂತದಲ್ಲಿ ನೀರು ಸರಬರಾಜುಗೊಳಿಸುತ್ತಿದ್ದು ಈ ಬಗ್ಗೆ

1. ಸದ್ರಿ ಕಾಮಗಾರಿಯನ್ನು ಹಸ್ತಾಂತರ ಮಾಡುವ ಕುರಿತು
2. ಮನೆ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸುವ ಬಗ್ಗೆ
3. ಸದ್ರಿ ಮನೆಗಳಿಂದ ಪರಿಷ್ಕೃತ ನೀರಿನ ದರ ವಸೂಲಿ ಮಾಡುವ ಬಗ್ಗೆ

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸಮಿತಿ ರಚಿಸಿ ಸಮಿತಿಯ ವರದಿಯನ್ನು ಸಭೆಗೆ ಮಂಡಿಸುವ ಬಗ್ಗೆ ತೀರ್ಮಾನಿಸಲಾಯಿತು. ಹಾಗೂ ಕುಡ್ಸೆಂಪ್‌ರವನ್ನು ಮುಂದಿನ ಸಾಮಾನ್ಯಸಭೆಗೆ ಕರೆದು ಚರ್ಚಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:7: ಎಸ್.ಎಫ್.ಸಿ 2009–2010ನೇ ಸಾಲಿನ ಕಾಮಗಾರಿಗೆ ಕ್ರಿಯಾಯೋಜನೆ ರಚನೆ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕ್ರಿಯಾಯೋಜನೆ ರಚಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:8: 2008–09ನೇ ಸಾಲಿನಲ್ಲಿ ಪುರಸಭೆ ಅಗತ್ಯ ಕೆಲಸಗಳಿಗೆ ಟ್ರ್ಯಾಕರ್ ಮತ್ತು ಲಾರಿ ಖರೀದಿಸುವರೇ ಜಿಲ್ಲಾ ಕೇಂದ್ರಿಕೃತ ಕರೆಯಲಾದ ಅಂಗೀಕೃತ ದರದಲ್ಲಿ ಖರೀದಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಖರೀದಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:9: 2009–2010ನೇ ಸಾಲಿನ ಪುರಸಭೆ ಲೆಕ್ಕ ಶೀರ್ಷಿಕೆಯಡಿ ಬಜೆಟಿನಲ್ಲಿ ರಸ್ತೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಾಗಿಟ್ಟ ನಿಧಿಗೆ ಕ್ರಿಯಾಯೋಜನೆ ರಚನೆ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಾಮಗಾರಿ ನಿರ್ವಹಿಸಲು ಹಣದ ಕೊರತೆ ಇರುವುದರಿಂದ ಮುಂದಕ್ಕೆ ಪರಿಶೀಲಿಸುವುದಾಗಿ ನಿರ್ಣಯಿಸಲಾಯಿತು

ವಿಷಯ:10:2009–2010ನೇ ಸಾಲಿನ ಪುರಸಭೆ ಲೆಕ್ಕ ಶೀರ್ಷಿಕೆಯಡಿ ಬಜೆಟಿನಲ್ಲಿ ನೀರು ಸರಬರಾಜು ಕಾಮಗಾರಿಗಳಿಗೆ ಮೀಸಲಾಗಿಟ್ಟ ನಿಧಿಗೆ ಕ್ರಿಯಾಯೋಜನೆ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕ್ರಿಯಾಯೋಜನೆ ರಚಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:11: 2009–2010ನೇ ಸಾಲಿನ ಪುರಸಭೆ ಲೆಕ್ಕ ಶೀರ್ಷಿಕೆಯಡಿ ಬಜೆಟಿನಲ್ಲಿ(ವಿದ್ಯುತ್)ದಾರಿದೀಪ ಮತ್ತು ವಿದ್ಯುತ್ ಸಾಲು ಕಂಬ ಇತ್ಯಾದಿ ಕಾಮಗಾರಿಗಳಿಗೆ ಮೀಸಲಾಗಿಟ್ಟ ನಿಧಿಗೆ ಕ್ರಿಯಾಯೋಜನೆ ರಚಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ 2009–2010, ಎಸ್.ಎಫ್.ಸಿ ನಿಧಿಯಲ್ಲಿ ಕ್ರಿಯಾಯೋಜನೆ ರಚಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:12:ಸ್ವಯಂಘೋಷಿತ ಆಸ್ತಿ ತೆರಿಗೆಯನ್ನು ಈ ಹಿಂದಿನ ಮಾಸಿಕ ಸಭೆಯಲ್ಲಿ ಯಾವುದೇ ಹೆಚ್ಚಳ ಮಾಡದೆ ಯಥಾಸ್ಥಿತಿಯಲ್ಲಿ ಮುಂದುವರೆಸುವಂತೆ ನಿರ್ಣಯಿಸಲಾಗಿದ್ದು, ದಿನಾಂಕ 21–5–2009ರ ಮಾನ್ಯ ಜಿಲ್ಲಾಧಿಕಾರಿಯವರು ನಡೆಸಿದ ಸಭೆಯಲ್ಲಿ ತಿಳಿಸಿದಂತೆ ಸಾಮಾನ್ಯ ಸಭೆಯಲ್ಲಿ ಮಂಡಿಸುವ ಬಗ್ಗೆ.
ನಿರ್ಣಯ: ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಮುಖ್ಯಾಧಿಕಾರಿಯವರು ಸಭೆಗೆ 2002–03ರಿಂದ ಈ ಪದ್ಧತಿ ಜಾರಿಯಲ್ಲಿರುವುದರಿಂದ 2005–06ನೇ ಸಾಲಿಗೆ ತೆರಿಗೆ ಪರಿಷ್ಕರಣೆ ಆಗಬೇಕಿತ್ತು ಆದರೆ ಉಳ್ಳಾಲ ಪುರಸಭೆಯಲ್ಲಿ ಆಗದೇ ಇರುವುದರಿಂದ 2009–2010ನೇ ಸಾಲಿಗೆ ಪರಿಷ್ಕರಿಸಲು ಸಭೆಗೆ ವಿವರಣೆ ನೀಡಿದರೂ ಸಭೆ ಪರಿಷ್ಕರಣೆಯನ್ನು ಒಪ್ಪದೆ ಇರುವುದರಿಂದ ಮುಂದಿನ ಸಭೆಗೆ ವಿಷಯವನ್ನು ಮಂಡಿಸಲು ನಿರ್ಣಯಿಸಲಾಯಿತು.

ವಿಷಯ:13: 2009–2010ನೇ ಸಾಲಿನ ಮಳೆನೀರು ಕೊಯ್ಲು ಯೋಜನೆಗೆ ಕ್ರಿಯಾಯೋಜನೆ ರಚನೆ ಬಗ್ಗೆ.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಈ ಕೆಳಗಿನ ಸ್ಥಳಗಳಲ್ಲಿ ಮಾಡುವುದಾಗಿ ನಿರ್ಣಯಿಸಲಾಯಿತು.

1. ಕಲ್ಲಾಪು ಪಟ್ಲ ದ.ಕ.ಜಿ.ಪ.ಹಿ.ಪ್ರಾ.ಶಾಲೆ
2. ಮೊಗವೀರಪಟ್ಣನ ದ.ಕ.ಜಿ.ಪ.ಹಿ.ಪ್ರಾ.ಶಾಲೆ
3. ಬಬ್ಬುಕಟ್ಟೆ ದ.ಕ.ಜಿ.ಪ.ಪ್ರೌಢಶಾಲೆ
4. ಬಬ್ಬುಕಟ್ಟೆ ಹಿ.ಪ್ರಾ.ಶಾಲೆ
5. ಒಂಬತ್ತುಕೆರೆ ದ.ಕ.ಜಿ.ಪ.ಹಿ.ಪ್ರಾ.ಶಾಲೆ
6. ಒಂಬತ್ತುಕೆರೆ, ದ.ಕ.ಜಿ.ಪ.ಕಿ.ಪ್ರಾ.ಶಾಲೆ
7. ಮೆಲಂಗಡಿ ದ.ಕ.ಜಿ.ಪ.ಕಿ.ಉರ್ದು.ಪ್ರಾ.ಶಾಲೆ
8. ಉಳ್ಳಾಲ ಪುರಸಭೆ ವ್ಯಾಪ್ತಿಯ 10 ಅಂಗನವಾಡಿ ಕೇಂದ್ರಗಳು

ವಿಷಯ:14: ಮನೆ ಮನೆಯಿಂದ ಕಸಸಂಗ್ರಹಣೆ ಮಾಡುವ ಬಗ್ಗೆ ಕ್ರಿಯಾಯೋಜನೆ ರಚಿಸುವ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮನೆ ಮನೆ ಕಸ ಸಂಗ್ರಹಣೆ ಕುರಿತು ಸಾರ್ವಜನಿಕರಿಗೆ ಮತ್ತು ಎಸ್.ಜೆ.ಎಸ್.ಆರ್.ವೈಯ ಸ್ವಸಹಾಯ ಸಂಘಗಳ ಸದಸ್ಯರಿಗೆ ಸೂಕ್ತ ಮಾಹಿತಿಯನ್ನು ನೀಡಿ ಪ್ರಾರಂಭಿಕ ಹಂತದಲ್ಲಿ ಪುರಸಭೆಯಿಂದ ಪ್ರತಿತಿಂಗಳು ಮನೆ ಮನೆ ಕಸಸಂಗ್ರಹಿಸುವ ಗುಂಪುಗಳಿಗೆ 30,000/–ರೂಪಾಯಿಗಳನ್ನು ನೀಡುವುದೆಂದು ನಿರ್ಣಯಿಸಲಾಯಿತು.

ವಿಷಯ:15: ಉಳ್ಳಾಲ ಪುರಸಭಾ ಕಚೇರಿಗೆ ಅಗತ್ಯವಿರುವ ಒಂದು ದ್ವಿತಿಯ ದರ್ಜೆ ಸಹಾಯಕ ಸಿಬ್ಬಂದಿಯನ್ನು ಅರ್ಹ ಗುತ್ತಿಗೆದಾರರ ಮೂಲಕ ನೇಮಕಗೊಳಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸರ್ಕಾರದ ನಿಯಾಮಾವಳಿಯಂತೆ ನೇಮಕಾತಿ ಮಾಡುವರೇ ಪುರಸಭೆಗೆ ಅಧಿಕಾರ ಇರುವುದಿಲ್ಲವಾಗಿ ಇನ್ನು ಮುಂದಕ್ಕೆ ಉರೂಸು ಕಾರ್ಯಕ್ರಮ ನಡೆಯಲಿರುವುದರಿಂದ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವುದಾಗಿ ನಿರ್ಣಯಿಸಲಾಯಿತು.

ವಿಷಯ: 16: ಉಳ್ಳಾಲ ಪುರಸಭಾ ವ್ಯಾಪ್ತಿ ಉಳ್ಳಾಲ ಉಳಿಯ ಟಿ.ಸಿಹೊಯಿಗೆ ಟಿ..ಸಿ ಸಕ್ಯೂಟ್, ಸಾಧುಹಿತ್ಲು ಟಿ.ಸಿ ಎಂಬಲ್ಲಿ ಸ್ವಿಚ್ ದಾರಿದೀಪಗಳಿಗೆ ದಾರಿದೀಪದ ಲೈನು ಎಳೆದು ಮೀಟರ್ ಕನೆಕ್ಷನ್ ಮಾಡಿಕೊಡುವ ಬಗ್ಗೆ ಅಂದಾಜು ಪಟ್ಟಿಯ ವ್ಯತ್ಯಾಸ ಮೊತ್ತ ರೂ. 73,000/- ಮೆಸ್ಕಾಂ ಇಲಾಖೆಗೆ ಪಾವತಿಸಲು ಕಾರ್ಯ ನಿರ್ವಾಹಕ ಇಂಜಿನಿಯರ್ ಮೆಸ್ಕಾಂ ಇವರ ದಿನಾಂಕ 2-1-2009ರ ಪತ್ರದ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪಾವತಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:17:ಉಳ್ಳಾಲ ಪುರಸಭೆ ವ್ಯಾಪ್ತಿಯ 8ನೇ ವಾರ್ಡಿನ ಅಲೇಕಲ ಕಿಶೋರ್‌ರವರ ಮನೆ ಬಳಿ 75ಮೀ ಚರಂಡಿ ರಚನೆ ಬಗ್ಗೆ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು

ವಿಷಯ:18: ಉಳ್ಳಾಲ ಪುರಸಭೆ ವ್ಯಾಪ್ತಿಯ 15ನೇ ವಾರ್ಡಿನ ಸಾಯಿಬಕ್ಕನ ಮನೆಯಿಂದ ತೋಮಸ್‌ರವರ ಮನೆತನಕ ಚರಂಡಿ ರಚಿಸಿ ರಸ್ತೆಗೆ ಇಂಟರ್‌ಲಾಕ್ ಅಳವಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ಮಹಾಲಕ್ಷ್ಮಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು

ವಿಷಯ:19: ಉಳ್ಳಾಲ ಪುರಸಭೆ ವ್ಯಾಪ್ತಿಯ 20ನೇ ವಾರ್ಡಿನ ಕಾಫಿಕಾಡು ಮುರಳಿ ಮನೆಯಿಂದ ಅರುಣ್ ಕುಮಾರ್ ಮನೆವರೆಗೆ ರಸ್ತೆಗೆ ಕಾಂಕ್ರೀಟಿಕರಣ ಮತ್ತು ಚರಂಡಿಗೆ ತಡೆಗೋಡೆ ರಚಿಸುವರೇ ಸ್ಥಳಿಯ ಸದಸ್ಯರಾದ ಕು.ಭವಾನಿ ಇವರ ಮನವಿ ಕುರಿತು.
ನಿರ್ಣಯ:ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತಯರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:20: ಉಳ್ಳಾಲ ಪುರಸಭೆ ವ್ಯಾಪ್ತಿಯ 20ನೇ ವಾರ್ಡಿನ ಕಾಫಿಕಾಡು 3ನೇ ಅಡ್ಡರಸ್ತೆಯ ಜೆ.ಬಿ ಬೇಕರಿಯ ಹತ್ತಿರದ ನೀರಿನ ಪೈಪುಗಳಲ್ಲಿ ಮಣ್ಣು ತುಂಬಿದ್ದು, ನೀರಿಲ್ಲದೆ ಹಲವಾರು ಮನೆಗಳಿಗೆ ತೊಂದರೆಯಾಗುವ ಬಗ್ಗೆ ಸ್ಥಳೀಯ ಸದಸ್ಯರಾದ ಕು. ಭವಾನಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ನೀರಿನ ಪೈಪನ್ನು ದುರಸ್ತಿಪಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:21: ಉಳ್ಳಾಲ ಪುರಸಭೆ ವ್ಯಾಪ್ತಿಯ 25ನೇ ವಾರ್ಡಿನ ಪಂಡಿತಹೌಸ್ ಶಿವಾಜಿನಗರ ಗಗನ್ ಪರ್ನಿಚರ್ ಬಳಿ 2ಇಂಚಿನ 36ಮೀ ಕೊಳವೆಯನ್ನು ಅಳವಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ರತ್ನಾವತಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:22: ಉಳ್ಳಾಲ ಪುರಸಭೆ ವ್ಯಾಪ್ತಿಯ 26ನೇ ವಾರ್ಡಿನ ಸೇವಂತಿಗುಡ್ಡೆಯಲ್ಲಿ ಕೆಯುಐಡಿಎಫ್‌ಸಿಯವರು ರಸ್ತೆಗೆ ಚರಂಡಿ ರಚಿಸಿದ್ದು ಮಳೆ ಬಂದು ಚರಂಡಿಯು ಒಂದುಬದಿ ಹಲವಾರು ಕಡೆ ಜರಿದಿದ್ದು, ಸುಮಾರು 9 ಮನೆಗಳು ಬೀಳುವ ಸಾಧ್ಯತೆ ಇರುವುದರಿಂದ ತುರ್ತಾಗಿ ಒಂದು ಬದಿಗೆ 100ಮೀಟರ್ ಉದ್ದಕ್ಕೆ 6ಫೀಟ್ ಎತ್ತರದ ತಡೆಗೋಡೆ ರಚಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಏಡಿಬಿಯವರಿಂದ ಮಾಡಿಸುವುದಾಗಿ ನಿರ್ಣಯಿಸಲಾಯಿತು. ಅವರು ಮಾಡಿಸಲು ಒಪ್ಪದಿದ್ದಲ್ಲಿ ಪುರಸಭೆಯಿಂದ ಸ್ಥಳ ಪರಿಶೀಲಿಸಿ ಅಗತ್ಯವಿದ್ದಲ್ಲಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:23:2009-2010ನೇ ಸಾಲಿನ ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ನೀರು ಸರಬರಾಜು, ಪಂಪುಚಾಲನೆ ಮತ್ತು ಕೊಳವೆದುರಸ್ತಿಗಳ ಕಾಮಗಾರಿಯನ್ನು 2008-09ರ ಸಾಲಿನ ಟೆಂಡರು ಆದೇಶದಂತೆ ನಿರ್ವಹಿಸಲು ಗುತ್ತಿಗೆದಾರರಿಗೆ 28-3-2009ರಂದು ಆದೇಶ ನೀಡಿದ್ದು, ಅವರ ಗುತ್ತಿಗೆಯು ಮಾರ್ಚ್ 2009ಒಳಗೆ ಮುಗಿದಿದ್ದು 2009-2010ನೇ ಸಾಲಿನ ಕಾಮಗಾರಿಯನ್ನು 30-6-2009ರೊಳಗೆ ನಿರ್ವಹಿಸಲು ಈಗಿನ ಅತೀ ಕಡಿಮೆ ದರದ ಟೆಂಡರು ದರದಂತೆ ನೀಡಬೇಕಾಗಿ ಗುತ್ತಿಗೆದಾರರು ಅರ್ಜಿ ನೀಡಿದ್ದು ಇದರ ಬಗ್ಗೆ ಚರ್ಚಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಹಿಂದಿನ ದರದಂತೆ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:24: ಉಳ್ಳಾಲ ಪುರಸಭೆಯ ಕಟ್ಟಡ ಬಾಬ್ತು ಹಾಕಿರುವ ಹಳೆಯ ದಂಡನೆ ಬಾಕಿ ಫೀಸನ್ನು ಮನ್ನಾ ಮಾಡುವ ಬಗ್ಗೆ ಅಧ್ಯಕ್ಷರು ಉಳ್ಳಾಲ ಪುರಸಭೆ ಬಾಡಿಗೆದಾರರ ಒಕ್ಕೂಟ ತೊಕ್ಕೊಟ್ಟು ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆಯುವುದಾಗಿ ನಿರ್ಣಯಿಸಲಾಯಿತು.

ವಿಷಯ:25: ಉಳ್ಳಾಲ ಪುರಸಭೆ ವ್ಯಾಪ್ತಿಯ ಪೆರ್ಮನ್ನೂರು ಗ್ರಾಮದ ಕಲ್ಲಾಪು ಎಂಬಲ್ಲಿ ಅಂಬತಡಿ ಎಂಬಲ್ಲಿಗೆ ಹೋಗಲು ರಸ್ತೆ ನಿರ್ಮಾಣದ ಭೂಸ್ವಾಧೀನತೆ -ಭೂಸ್ವಾಧೀನ ವೆಚ್ಚ ಠೇವಣಿ ಇಡುವ ಕುರಿತು ಮಾನ್ಯ ಜಿಲ್ಲಾಧಿಕಾರಿಯವರ ಪತ್ರಸಂಖ್ಯೆ: ಎಲ್ ಎಕ್ಯೂ:ಇತರ:ಸಿಆರ್:167/2007-08 ದಿನಾಂಕ 7-5-2009ರ ಪತ್ರದ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಎಸ್.ಎಫ್.ಸಿ ನಿದಿಯಿಂದ ರೂ.ಹತ್ತುಲಕ್ಷ ಪಾವತಿಯಾಗಿದ್ದು ಉಳಿಕೆ ರೂ. 12-00ಲಕ್ಷ ವನ್ನು 2009-2010ನೇ ಸಾಲಿನ ಎಸ್.ಎಫ್.ಸಿ ನಿಧಿಯಿಂದ ಪಾವತಿಸಲು ಕಾನೂನು ತಜ್ಞರ ಸಲಹೆ ಪಡೆದು ಪಾವತಿಸುವುದಾಗಿ ನಿರ್ಣಯಿಸಲಾಯಿತು

ವಿಷಯ:26 ಉಳ್ಳಾಲ ಪುರಸಭೆ ವ್ಯಾಪ್ತಿಯ ಸ್ವರ್ಣಜಯಂತಿ ಶಹರೀ ರೋಜ್‌ಗಾರ್ ಯೋಜನೆಯಡಿ ಸಮುದಾಯ ಭವನ ನಿರ್ಮಾಣಕ್ಕಾಗಿ ಬಿಡುಗಡೆಯಾದ ರೂ 11-00ಲಕ್ಷಕ್ಕೆ ಸ್ಥಳವನ್ನು ಅಯ್ಕೆ ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಉಳ್ಳಾಲ ಪುರಸಭಾ ಮೈದಾನದಲ್ಲಿ ನಿರ್ಮಾಣ ಮಾಡುವುದು ಮತ್ತು ಹೆಚ್ಚುವರಿ ಹಣವನ್ನು ಪುರಸಭೆಯಿಂದ ಭರಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:27: ಎಸ್.ಎಫ್.ಸಿ ಅನುದಾನದ ಶೇ18ರ ನಿಧಿಯಡಿ ಮನೆ ರಿಪೇರಿ ಶೌಚಾಲಯ, ಉಚಿತ ನೀರಿನ ಸಂಪರ್ಕ ಇತ್ಯಾದಿಗಳಿಗೆ ಫಲಾನುಭವಿಗಳನ್ನು ಅಯ್ಕೆ ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಧ್ಯಕ್ಷರು, ಉಪಾಧ್ಯಕ್ಷರು, ಸ್ಥಾಯಿಸಮಿತಿ ಅಧ್ಯಕ್ಷರು ವಿರೋದಪಕ್ಷದ ನಾಯಕರು, ಸಂಬಂಧಪಟ್ಟ ವಾರ್ಡಿನ ಸದಸ್ಯರು ಮತ್ತು ಅಧಿಕಾರಿಗಳನ್ನು ಸೇರಿಸಿಕೊಂಡು ಸಮಿತಿರಚನೆ ಮಾಡಿ ಫಲಾನುಭವಿಗಳನ್ನು ಅಯ್ಕೆ ಮಾಡುವುದಾಗಿ ನಿರ್ಣಯಿಸಲಾಯಿತು.

ವಿಷಯ:28: ಎಸ್.ಎಫ್.ಸಿ ಅನುದಾನದ ಶೇ18ರನಿಧಿಯಡಿ ಪ್ರೋಬೇಷನರಿ ಕೋರ್ಸುಗಳನ್ನು ಪ್ಲಂಬರ್, ಇಲೆಕ್ಟ್ರಿಷಿಯನ್, ಕಂಪ್ಯೂಟರ್ ಜೆಸಿಬಿ ಅಪರೇಟರ್, ಡ್ರೈವಿಂಗ್, ಬ್ಯೂಟಿಷಿಯನ್ ತರಬೇತಿಗಾಗಿ ಫಲಾನುಭವಿಗಳನ್ನು ಅಯ್ಕೆ ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಧ್ಯಕ್ಷರು,ಉಪಾದ್ಯಕ್ಷರು, ಸ್ಥಾಯಿಸಮಿತಿ ಅಧ್ಯಕ್ಷರು, ವಿರೋದಪಕ್ಷದ ನಾಯಕರು ಸಂಬಂಧಪಟ್ಟ ವಾರ್ಡಿನ ಸದಸ್ಯರು ಮತ್ತು ಅಧಿಕಾರಿಗಳನ್ನು ಸೇರಿಸಿಕೊಂಡು ಸಮಿತಿ ರಚನೆ ಮಾಡಿ ಫಲಾನುಭವಿಗಳನ್ನು ಅಯ್ಕೆ ಮಾಡುವುದಾಗಿ ನಿರ್ಣಯಿಸಲಾಯಿತು.

ವಿಷಯ:29: ಉಳ್ಳಾಲ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆಗಳಿಗೆ ಅಳವಡಿಸಲು ಅಗತ್ಯವಿರುವ ಸಿಮೆಂಟು ಪೈಪುಗಳನ್ನು ಖರೀದಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಖರೀದಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:30: ಉಳ್ಳಾಲ ಪುರಸಭೆ ವ್ಯಾಪ್ತಿಯ13ನೇ ವಾರ್ಡಿನ ಈ ಕೆಳಗಿನ ಪ್ರದೇಶಗಳಲ್ಲಿ ಕಾಮಗಾರಿ ಮಾಡುವರೇ ಸ್ಥಳೀಯ ಸದಸ್ಯರಾದ ಶ್ರೀ ಅಬ್ದುಲ್ ಅಜೀಜ್ ಇವರ ಮನವಿ ಕುರಿತು.

1. ಸುಂದರಿಬಾಗ್ ಬದ್ರಿಯಾ ಜುಮ್ಮ ಮಸೀದಿ ಹತ್ತಿರ ಯು.ಎಂ ಹಸೈನಾರ್ ಮನೆಗೆ ಹೋಗುವ ರಸ್ತೆಯಲ್ಲಿ ಸುಮಾರು 270-300 ಮೀಟರನಷ್ಟು ರಸ್ತೆಗೆ ಕಾಂಕ್ರೀಟಿಕರಣ
2. ಸುಂದರಿಬಾಗ್ ಅನ್ನಾ ಅಹಮ್ಮದ್ ರವರ ಮನೆಗೆ ಹೋಗುವ ರಸ್ತೆಯಲ್ಲಿ ಸುಮಾರು ಮೀಟರ್ ರಸ್ತೆ ಶಿಥಿಲಾವಸ್ಥೆಯಲ್ಲಿದ್ದು ಮಳೆಗಾಲದಲ್ಲಿ ಇಲ್ಲಿ ನಡೆದಾಡಲು ಕಷ್ಟಕರವಾದ ಸ್ಥಿತಿಯಂತಿದೆ. ಅಲ್ಲಿ ವಸರು ಇರುವುದರಿಂದ ಅರ್ಜೆಂಟಾಗಿ ಕಾಂಕ್ರೀಟಿಕರಣ
3. ಅಜಾದ್ ನಗರ ಭಾರತ್ ಹೈಸ್ಕೂಲು ಬಳಿ ಕುಟ್ಟಿ ಎಂಬವರ ಹೊಟೇಲು ಪಕ್ಕದಿಂದ ಈ ಮೊದಲು ವಾಸ್ತವ್ಯವಿದ್ದ ನಜೀರ್ ಉಳ್ಳಾಲ್ ರವರ ಮಾಜಿ ಮನೆ ಹತ್ತಿರದಿಂದ ತಬ್ರುಝ್ ರವರ ಮನೆತನಕ ಸುಮಾರು 150ಮೀಟರ್ ಕಾಂಕ್ರೀಟಿಕರಣ.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

## ಅಧ್ಯಕ್ಷರ ಅನುಮತಿ ಮೇರೆಗೆ ಬರಬಹುದಾದ ಇತರ ವಿಷಯಗಳು

ವಿಷಯ:31: ಉಳ್ಳಾಲ ಪುರಸಭೆ ವ್ಯಾಪ್ತಿಯ ವಾರ್ಡುಸಂಖ್ಯೆ: 23ರ ಕೆರೆಬೈಲು ಎಂಬಲ್ಲಿ ರಸ್ತೆಯ ಬದಿಕಟ್ಟುವುದರ ಕಾಮಗಾರಿಯನ್ನು ರೂ 47000/-ಕ್ಕೆ ಅಂದಾಜುಪಟ್ಟಿ ತಯಾರಿಸಿದ್ದು, ಸದ್ರಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಕಿರಿಯ ಅಭಿಯಂತರರ ವರದಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ರಚಿಸಿದ ಅಂದಾಜುಪಟ್ಟಿಯಂತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಾಗಿ ನಿರ್ಣಯಿಸಲಾಯಿತು.

ವಿಷಯ:32: ಉಳ್ಳಾಲ ಪುರಸಭೆ ವ್ಯಾಪ್ತಿಯ ವಾರ್ಡು ಸಂಖ್ಯೆ: 14ರ ಒಂಬತ್ತುಕೆರೆ ಡ್ರೈವರ್ ಬಾಬುರವರ ಮನೆಯ ಹಿಂಬದಿ ಚರಂಡಿಯ ಬದಿ ಕಟ್ಟುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ದಿನೇಶ್ ರೈ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿಯನ್ನು ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:33: ಉಳ್ಳಾಲ ಪುರಸಭಾ ವ್ಯಾಪ್ತಿಯ ಉಳ್ಳಾಲಬೈಲು ಮಸೀದಿಯ ಎದುರಿನಿಂದ ಕಾಲುಸಂಕದವರೆಗೆ ಮತ್ತು ಉಳ್ಳಾಲ ತಾಜ್‌ಮಹಲ್ ಬಳಿಯ ಅಡ್ಡರಸ್ತೆಯ ಮೋರಿ ದುರಸ್ತಿ ಬಗ್ಗೆ ಮತ್ತು ಉಳ್ಳಾಲ ಬರಕಾ ಐಸ್ ಪ್ಯಾಕ್ಟರಿಯ ಎದುರು ರಸ್ತೆ ಅಭಿವೃದ್ಧಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಬಂದ ಟೆಂಡರನ್ನು ಪರಿಶೀಲಿಸಲಾಯಿತು. ಗುತ್ತಿಗೆದಾರರಾದ ಶ್ರೀ ವಿಜಯ ಉಳ್ಳಾಲಬೈಲು ಇವರು ಸೂಚಿಸಿದ ದರ ಅಂದಾಜುಪಟ್ಟಿಯ ದರವಾಗಿದ್ದು, ಸದ್ರಿ ದರವನ್ನು ಮಂಜೂರುಮಾಡಲು ನಿರ್ಣಯಿಸಲಾಯಿತು.

ವಿಷಯ:34; ಉಳ್ಳಾಲ ಪುರಸಭೆ ವ್ಯಾಪ್ತಿಯ 21ನೇ ವಾರ್ಡಿನ ಈ ಕೆಳಗಿನ ಸ್ಥಳಗಳಲ್ಲಿ ನೀರಿನ ಕೊಳವೆ ವಿಸ್ತರಣೆ ಮಾಡುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ರಜಿಯಾ ಇಬ್ರಾಹಿಂ ಇವರ ಮನವಿ ಕುರಿತು.

1. ಮಂಚಿಲ ರೈಲ್ವೆ ನಿಲ್ದಾಣದ ಹತ್ತಿರದಿಂದ ಪರಪು ಹರೀಶ್‌ರ ಮನೆಬಳಿಯವರೆಗೆ 2 ಇಂಚಿನ 300ಮೀಟರ್ ಕೊಳವೆ ವಿಸ್ತರಣೆ
2. ಪರಪು ಮಹಮ್ಮದ್‌ರವರ ಮನೆ ಬಳಿಯಿಂದ ಅಹಮ್ಮದ್ ರವರ ಮನೆತನಕ 2ಇಂಚಿನ 150ಮೀಟರ್ ಕೊಳವೆ ವಿಸ್ತರಣೆ ಮತ್ತು 2ಇಂಚಿನ ಒಂದು ಹೊಸಗೇಟ್‌ವಾಲ್ ಅಳವಡಿಸುವುದು
3. ಕಟ್ಟತಲೆ ಲತೀಫ್ ರವರ ಮನೆ ಬಳಿಯಿಂದ ಸ್ಟೋರ್ ಹೌಸ್ ವರೆಗೆ 250ಮೀಟರ್ 2ಇಂಚಿನ ಕೊಳವೆ ವಿಸ್ತರಣೆ ಮತ್ತು 2ಇಂಚಿನ ಒಂದು ಗೇಟ್‌ವಾಲ್ ಅಳವಡಿಸುವುದು.
4. ಹರೀಶ್ ಮನೆ ಬಳಿಯಿಂದ ಆಲ್ವಿನ್ ಡಿಸೋಜ ಮನೆವರೆಗೆ 250ಮೀಟರ್ ಕೊಳವೆವಿಸ್ತರಣೆ ಮತ್ತು 2ಇಂಚಿನ 2ಗೇಟ್‌ವಾಲ್ ಅಳವಡಿಸುವುದು.
5. ಮಂಚಿಲ ಅಹಮ್ಮದ್ ಮನೆಬಳಿಯಿಂದ ಸುನಿಲ್ ಡಿಸೋಜ ಮನೆಯವರೆಗೆ 100ಮೀಟರ್‌ನ 1ಇಂಚು ಕೊಳವೆ ವಿಸ್ತರಣೆ

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:35: ಉಳ್ಳಾಲ ಪುರಸಭಾ ವ್ಯಾಪ್ತಿಯ 3ನೇ ವಾರ್ಡುನ ಮೋಗವೀರಪಟ್ನ ಶ್ರೀ ವೀರಭದ್ರ ದೇವಸ್ಥಾನದ ಬಳಿ ಮೆಟಲ್ ಹೈಮಾಸ್ಟ್ ಲೈಟು ಅಳವಡಿಸುವ ಕುರಿತು ಸ್ಥಳೀಯ ಸದಸ್ಯರಾದ ಶ್ರೀಮತಿ ಮೀನಾಕ್ಷಿ ಡಿ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಎಸ್.ಎಫ್.ಸಿ ನಿಧಿಯಲ್ಲಿ ಅಳವಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:36: ಉಳ್ಳಾಲ ಪುರಸಭಾ ವ್ಯಾಪ್ತಿಯ ಮುಕ್ಕಚೇರಿಯಿಂದ ಸುಂದರಿಭಾಗ್‌ಗೆ ಹೋಗುವ ಮೋರಿಯು ಕುಸಿದ ಕಾರಣ ಅದನ್ನು ದುರಸ್ತಿಪಡಿಸಿ ಹಾಸುಕಲ್ಲು ಹಾಕಿ ಮಣ್ಣು ಹಾಕಿ ಸಮತಟ್ಟುಗೊಳಿಸಿ ವಾಹನಸಂಚಾರಕ್ಕೆ ಅನುಕೂಲ ಮಾಡಿಕೊಡುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ಮಹಮ್ಮದ್ ಮುಕ್ಕಚೇರಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:37:ಉಳ್ಳಾಲ ಪುರಸಭಾ ವ್ಯಾಪ್ತಿಯ ಕಲ್ಲಾಪು ಮುಡಿಪೋಡಿ ರಸ್ತೆಯಲ್ಲಿರುವ ಮೋರಿಗೆ ಹಾಸಿದಂತಹ ಚಪ್ಪಡಿಕಲ್ಲುಗಳು ತುಂಡಾಗಿ ಮೋರಿ ಕುಸಿದಿರುವುದರಿಂದ ಅದನ್ನು ದುರಸ್ತಿಪಡಿಸಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ರವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:38:ಉಳ್ಳಾಲ ಪುರಸಭಾ ವ್ಯಾಪ್ತಿಯ ಒಂಬತ್ತುಕೆರೆ, ಆಶ್ರಯ ಸೈಟಿನಲ್ಲಿ ಕೊಳವೆಬಾವಿಯ ನೀರು ಬತ್ತಿಹೋದ ಕಾರಣ ಅದರ ಪಕ್ಕದಲ್ಲಿ ಹೊಸ ಕೊಳವೆಬಾವಿಯನ್ನು ಕೊರೆದಿರುವುದರಿಂದ ಅದಕ್ಕೆ ಬೇಕಾದ ವಿದ್ಯುತ್ ಸಂಪರ್ಕ ಮತ್ತು ನೀರಿನ ಕೊಳವೆಯನ್ನು ಜೋಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ದಿನೇಶ್ ರೈ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:39: ಉಳ್ಳಾಲ ಪುರಸಭೆ ವ್ಯಾಪ್ತಿಯ 10ನೇ ವಾರ್ಡಿನ ಹಳೇಕೋಟೆ ಮಸೀದಿಯ ಎದುರುಗಡೆ ಮತ್ತು ಹಳೇಕೋಟೆ ಅಲ್ತಾಫ್ ಮನೆಯ ಬಳಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಪೈಪುಹಾಕಿ ಛೇಂಬರ್ ನಿರ್ಮಿಸಿಕೊಡುವಂತೆ ಸ್ಥಳೀಯ ಸದಸ್ಯರಾದ ಶ್ರೀಮತಿ ಜಮೀಲ ಹುಸೈನ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:40: ಉಳ್ಳಾಲ ಪುರಸಭೆಯ ಸೇವಂತಿಗುಡ್ಡೆ ಪ್ರದೇಶಕ್ಕೆ ರಸ್ತೆ ಇಲ್ಲದ ಕಾರಣ ಎತ್ತರದ ಪ್ರದೇಶಕ್ಕೆ ಮತ್ತು ತಗ್ಗು ಪ್ರದೇಶಕ್ಕೆ ನೀರು ಸರಬರಾಜು ಮಾಡುವರೇ 400ಮೀಟರ್ ಒಂದೂವರೆ ಇಂಚಿನ ಗ್ರೀನ್‌ಹೋಸ್ ಪೈಪು ಒದಗಿಸುವಂತೆ ಸಾರ್ವಜನಿಕರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅತೀ ಅಗತ್ಯವೆಂದು ಪರಿಗಣಿಸಿ ಖರೀದಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:41: ಉಳ್ಳಾಲಪುರಸಭಾ ಪ್ರದೇಶಕ್ಕೆ ಈಗಾಗಲೇ ತುಂಬೆ ವೆಂಟೆಡ್ ಡ್ಯಾಂನಿಂದ ನೀರು ಸರಬರಾಜು ಮಾಡುವರೇ ಕೆಯುಐಡಿಎಫ್‌ಸಿ ವತಿಯಿಂದ ಕಾಮಗಾರಿಯು ಅಂತಿಮ ಹಂತದಲ್ಲಿರುವುದರಿಂದ ದಿನಾಂಕ 25-11-2008ರ ಪುರಸಭಾ ಟೆಂಡರು ಪ್ರಕಟಣೆ ಸಂಖ್ಯೆ:ಉಪುಸ(6)ಸಿಆರ್:40:2008-09ರಂತೆ ಪ್ಯಾಕೆಜ್ ನಂಬ್ರ:15ರಂತೆ ತೊಕ್ಕೊಟ್ಟು ಬಸ್ಸುನಿಲ್ದಾಣದ ಬಳಿ ಸಾರ್ವಜನಿಕ ತೆರೆದಬಾವಿ ರಚನಾ ಕಾಮಗಾರಿಗೆ ಬದಲಿ ಕಾಮಗಾರಿ ಬಗ್ಗೆ ಪ್ರಸ್ತಾವನೆ ಸಲ್ಲಿಸಬೇಕಾಗಿ ಸ್ಥಳೀಯ ಸದಸ್ಯರಾದ ಶ್ರೀ ಯು.ಎಚ್.ಪಾರೂಕ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಉಳ್ಳಾಲ ಪುರಸಭಾ ವ್ಯಾಪ್ತಿಯ ಕಲ್ಲಾಪು ಹಿದಾಯತ್ ರಸ್ತೆಯನ್ನು ಕಾಂಕ್ರೀಟಿಕರಣಗೊಳಿಸಿ ಇಂಟರ್‌ಲಾಕ್ ಅಳವಡಿಸುವುದಾಗಿಯೂ ಮತ್ತು ಬದಲಿ ಪ್ರಸ್ತಾವನೆ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರನ್ನು ವಿನಂತಿಸುವುದಾಗಿಯೂ ನಿರ್ಣಯಿಸಲಾಯಿತು.

ವಿಷಯ:42:ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೋಟ್ಟು ಬಸ್ಸು ನಿಲ್ದಾಣದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಪ್ರೀಝರ್‌ಗೆ ಬೇಕಾಗುವ ನೀರು ಮತ್ತು ವಿದ್ಯುತನ್ನು ಉಚಿತವಾಗಿ ಒದಗಿಸುವ ಬಗ್ಗೆ ಅದ್ಯಕ್ಷರು ಮತ್ತು ಸದಸ್ಯರು ಜಮಾಅತ್-ಇಸ್ಲಾಮಿಹಿಂದ್ ಉಳ್ಳಾಲ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಶರ್ತಗಳನ್ನು ವಿಧಿಸಿ ಒದಗಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:43: ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೋಟ್ಟು ಗಣೇಶ್ ನಗರ ಸಾರ್ವಜನಿಕ ಶ್ರೀ ಗಣೇಶ ಸೇವಾ ಸಮಿತಿಯಿಂದ ಕಟ್ಟಲ್ಪಡುವ ಕಟ್ಟಡದ ಬಳಿ ಇರುವ ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಿಸುವಂತೆ ಅಧ್ಯಕ್ಷರು ಶ್ರೀ ಗಣೇಶ್ ಸೇವಾ ಸಮಿತಿ ತೊಕ್ಕೋಟ್ಟು ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮೆಸ್ಕಾಂ ಇಲಾಖೆಗೆ ಪತ್ರ ಬರೆದು ಅಂದಾಜುಪಟ್ಟಿ ತಯಾರಿಸಿ ಪುರಸಭಾ ನಿಧಿಯಿಂದ ವೆಚ್ಚವನ್ನು ಭರಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:44: ಉಳ್ಳಾಲ ಪುರಸಭಾ ವ್ಯಾಪ್ತಿಯ ಅಲ್ ಮುನಾವರ್ ಮಸೀದಿ ಬಳಿ 12ನೇ ಹಣಕಾಸು ಯೋಜನೆಯಡಿ ನಿರ್ವಹಿಸಿದ ಕಾಮಗಾರಿ ವಿಸ್ತರಣೆ ಕುರಿತು ಕಿರಿಯ ಅಭಿಯಂತರರ ವರದಿ ಕುರಿತು.

1. ಚರಂಡಿ ಬದಿ ಕಟ್ಟುವ ಕಾಮಗಾರಿ
2. ರಸ್ತೆಗೆ ಮಣ್ಣು ಹಾಕುವುದು

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:45: ಉಳ್ಳಾಲ ಪುರಸಭೆ ವ್ಯಾಪ್ತಿಯ 8ನೇ ವಾರ್ಡುನ ಕಕ್ಕೆತೋಟ ಮೀಸೆ ಖಾದರ್‌ರವರ ಮನೆ ಬಳಿಯಿಂದ ಮಹಮ್ಮದ್ ಆಲಿ ಮನೆತನಕ ಮಳೆನೀರು ಹರಿದುಹೋಗುವ ವ್ಯವಸ್ಥೆ ಮಾಡುವ ಬಗ್ಗೆ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:46:ಉಳ್ಳಾಲ ಪುರಸಭೆ ವ್ಯಾಪ್ತಿಯ 24ನೇ ವಾರ್ಡುನ ಈ ಕೆಳಗಿನ ಸ್ಥಳಗಳಲ್ಲಿ ಪೈಪುಲೈನು ವಿಸ್ತರಣೆ ಮಾಡುವ ಬಗ್ಗೆ ಸಾರ್ವಜನಿಕರ ಮನವಿ ಕುರಿತು.

1. ಚೆಂಬುಗುಡ್ಡೆ ಎಸ್.ಸಿ ಕಾಲೋನಿಯಲ್ಲಿ ಶಶಿಯಕ್ಕನವರ ಮನೆಬಳಿಯಿಂದ ಮಹಾಂಕಾಳಿ ದೇವಸ್ಥಾನದತನಕ ಎರಡೂವರೆ ಇಂಚಿನ ಪೈಪುಲೈನು ವಿಸ್ತರಣೆ.
2. ಚೆಂಬುಗುಡ್ಡೆ ಅಲ್ ಬದ್ರಿಯಾ ಹೋಟೆಲಿನಿಂದ ಮುಸ್ತಾಫರವರ ಮನೆತನಕ ಪೈಪುಲೈನು ವಿಸ್ತರಣೆ

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:47: ಉಳ್ಳಾಲ ಪುರಸಭಾ ವ್ಯಾಪ್ತಿಯ ಕಲ್ಲಾಪು ಅಲ್ ಮುನಾವರ್ ಬಳಿಯ ಮಸೀದಿಯ ಬಳಿಯ ಬಾವಿಗೆ ಪಂಪು ಅಳವಡಿಸಿ ವಿದ್ಯುತ್ ಜೋಡಣೆ ಮಾಡಿ ಕಲ್ಲಾಪು ಈ ಕೆಳಗಿನ ಪ್ರದೇಶಕ್ಕೆ ಪೈಪುಲೈನು ವಿಸ್ತರಣೆ ಬಗ್ಗೆ ಸದಸ್ಯರುಗಳಾದ ಫಾರೂಕ್ ಯು.ಎಚ್, ಶ್ರೀಮತಿ ಸುಹಾಸಿನಿ, ಶ್ರೀಮತಿ ಪ್ರಮೋದಿನಿ ಇವರ ಮನವಿ ಕುರಿತು.

1. ಕಲ್ಲಾಪು ಮಸೀದಿಯಿಂದ ಕಲ್ಲಾಪು ರಾಷ್ಟ್ರೀಯ ಹೆದ್ದಾರಿವರೆಗೆ
2. ಕಲ್ಲಾಪು ಪಟ್ಲಾ ರಸ್ತೆಯಿಂದ ರಜಾಕ್ ಮನೆಯವರೆಗೆ
3. ಕಲ್ಲಾಪು ಪಟ್ಲಾ ರಸ್ತೆಯಿಂದ ಹಮೀದ್ ರವರ ಮನೆತನಕ
4. ಕಲ್ಲಾಪು ಪಟ್ಲಾ ರಸ್ತೆಯಿಂದ ಅಮ್ಮುಕೋವಲ್ ಮನೆತನಕ
5. ಕಲ್ಲಾಪು ಪಟ್ಲಾ ರಸ್ತೆಯಿಂದ ಪಕ್ಕಿಹಿತ್ಲು ರಸ್ತೆತನಕ
6. ಕಲ್ಲಾಪು ಪಟ್ಲಾ ರಸ್ತೆಯಿಂದ ಬುಕಾರಿ ಮನೆಯವರೆಗೆ
7. ಕಲ್ಲಾಪು ಪಟ್ಲಾ ರಸ್ತೆಯಿಂದ ಪಟ್ಲಾ ಶಾಲೆಯವರೆಗೆ
8. ಕಲ್ಲಾಪು ಪಟ್ಲಾ ರಸ್ತೆಯಿಂದ ಡಿಸೋಜರವರ ಮನೆಯವರೆಗೆ

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ಸಹಿ. ಅಧ್ಯಕ್ಷರು ಮತ್ತು ಸದಸ್ಯರು

(ಯಥಾಪ್ರತಿ)

ಮುಖ್ಯಾಧಿಕಾರಿ
ಉಳ್ಳಾಲ ಪುರಸಭೆ,ದ.ಕ